ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್ ಮೈ 2018, ದಿನಾಂಕ: 01-02-2019 ರಂತೆ ಅನುಮೋದಿಸಿದ್ದ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂ ಎನ್ ಮೈ 2018, ದಿನಾಂಕ: 01-02-2019.
2. ಸರ್ಕಾರದ ಆದೇಶ ಸಂಖ್ಯೆ: 47 ಎಸ್ ಎಫ್ ಸಿ 2016, ದಿನಾಂಕ: 14-06-2016 ಮತ್ತು 03-11-2016.

* * * * *

ಪ್ರಸ್ತಾವನೆ,

ಮೇಲೆ (1) ರಲ್ಲಿ ಓದಲಾದ ದಿನಾಂಕ: 01-02-2019ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2018-19ನೇ ಸಾಲಿಗೆ ರೂ.2500 ಕೋಟಿಗಳನ್ನು ಒದಗಿಸಲಾಗಿದ್ದು, ಈ ಬಗ್ಗೆ 2018-19, 2019-20, 2020-21ರಲ್ಲಿ ಅನುಷ್ಠಾನಗೊಳಿಸಲು ಬಿಬಿಎಂಪಿಯು ಕ್ರಿಯಾಯೋಜನೆ ಸಲ್ಲಿಸಿತ್ತು. ಸದರಿ ಪ್ರಸ್ತಾವನೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳ ಪರಾಮರ್ಶೆ ಮತ್ತು ಅನುಮೋದನೆ ಆಗಿರುವಂತೆ ಸಚಿವ ಸಂಪುಟದ ಮುಂದೆ ಮಂಡಿಸಲಾಗಿತ್ತು.

2. ಸಚಿವ ಸಂಪುಟವು ಸದರಿ ಪ್ರಸ್ತಾವನೆಯಲ್ಲಿ ಅನುಬಂಧ-1 ರಿಂದ 14ರಲ್ಲಿ ಒಳಗೊಂಡಿರುವ ವಿವಿಧ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ "ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ 4217-01-800-0-02" ರಲ್ಲಿ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಪೂರ್ವಭಾವಿ ಕೆಲಸ ಕಾರ್ಯಗಳಿಗೆ ಅವಕಾಶ ಕಲ್ಪಿಸಿ, 2018-19ರ ರೂ.2500 ಕೋಟಿಗಳ ಆಯವ್ಯಯ ಘೋಷಣೆಗೆ ರೂ.5515.37 ಕೋಟಿಗಳ ಹೆಚ್ಚುವರಿ ಅನುದಾನ ಕಲ್ಪಿಸಿ ರೂ. 8015.37 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ ಮತ್ತು ಈ ಕಾಮಗಾರಿಗಳನ್ನು ಆಯವ್ಯಯದ ಘೋಷಣೆಯಂತೆ ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆದು, ರೂ.10 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಮುಂದಿನ ಎರಡು

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ವರ್ಷಗಳಲ್ಲಿ ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement portal ಮುಖಾಂತರ ಕೈಗೊಂಡು, ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ :ನಅಇ 47 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ:14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಹಂತಹಂತವಾಗಿ ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿರುತ್ತದೆ. ಹಾಗೂ ರೂ.50 ಕೋಟಿಗಳಿಗೆ ಮಿರಿದ ಪ್ಯಾಕೇಜ್ ಮತ್ತು ಕಾಮಗಾರಿಗಳ ಟೆಂಡರ್ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ಸಚಿವ ಸಂಪುಟದಿಂದ ಪಡೆದುಕೊಳ್ಳತಕ್ಕದ್ದು ಎಂದು ಷರತ್ತು ವಿಧಿಸಲಾಗಿರುತ್ತದೆ. ಈ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ ನಅಇ 375 ಎಂಎನ್‌ಪ್ರೆ 2018, ಬೆಂಗಳೂರು ದಿನಾಂಕ 01-02-2019ರಂತೆ ರೂ.8015.37 ಕೋಟಿಗಳ ಕ್ರಿಯಾಯೋಜನೆಯನ್ನು ಅನುಮೋದಿಸಿ ಆದೇಶ ಹೊರಡಿಸಲಾಗಿದೆ.

ವಿವಿಧ ಕಾಮಗಾರಿಗಳ ಅನುದಾನ ಹಂಚಿಕೆ ಈಕೆಳಗಿನಂತಿದೆ

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಕೋಟಿ)	2018-19ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2019-20ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2020-21ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)
1	ಮೈಟ್ ಟಾಪಿಂಗ್	1172.00	250.00	500.00	422.00
2	ಕೆರೆಗಳ ಅಭಿವೃದ್ಧಿ	348.00	250.00	98.00	0.00
3	ರಸ್ತೆಗಳ ಅಭಿವೃದ್ಧಿ	2246.68	700.00	1546.68	0.00
4	ಗ್ರೇಡ್ ಸೆಪರೇಟರ್ ನಿರ್ಮಾಣ	534.60	140.00	300.00	94.60
5	ಬೃಹತ್ ನೀರುಗಾಲುವೆ ಅಭಿವೃದ್ಧಿ	1321.14	400.00	600.00	321.14
6	ಪಾದಚಾರಿ ಮಾರ್ಗಗಳ ಅಭಿವೃದ್ಧಿ	75.00	50.00	25.00	0.00
7	110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿ	275.00	180.00	95.00	0.00
8	ಐ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿ.	80.00	20.00	60.00	0.00
9	ಎನ್.ಐ.ಎಲ್-ವಿಂಡ್ ಟನಲ್ ರಸ್ತೆ ನಿರ್ಮಾಣ.	65.00	30.00	35.00	0.00
	ಮೊತ್ತ	**6117.42**	**2020.00**	**3259.68**	**837.74**
10	ಘನ ತ್ಯಾಜ್ಯ ನಿರ್ವಹಣೆ	753.00	200.00	443.00	110.00
11	ಕಟ್ಟಡಗಳು ಮತ್ತು ಆಸ್ಪತ್ರೆಗಳು	247.95	55.00	192.95	0.00
12	ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಿರುವ ಜಮೀನಿನಲ್ಲಿ	102.00	50.00	52.00	0.00

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಕೋಟಿ)	2018-19ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2019-20ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)	2020-21ಕ್ಕೆ ಬೇಕಿರುವ ಮೊತ್ತ (ರೂ.ಕೋಟಿ)
	ಅನುಷ್ಠಾನಗೊಳಿಸಬೇಕಿರುವ ಯೋಜನೆಗಳು				
13	ಯೋಜನೆಗಳ ಭೂಸ್ವಾಧೀನ ಪಚ್ಚ	100.00	100.00	0.00	0.00
14	ಬಿಡಿಎ ಯಿಂದ ಬಿಬಿಎಂಪಿಗೆ ವರ್ಗಾವಣೆಗೊಂಡಿರುವ ಯೊಜನೆಗಳು	195.00	75.00	70.00	50.00
15	ಮಾನ್ಯ ಮುಖ್ಯಮಂತ್ರಿಗಳ ವಿಶೇಚನೆಗೆ ಒಳಪಟ್ಟು ಕಾಯ್ದಿಟ್ಟು ಅನುದಾನ	300.00	0.00	150.00	150.00
16	ಮಾನ್ಯ ಉಪ ಮುಖ್ಯಮಂತ್ರಿಗಳ ವಿಶೇಚನೆಗೆ ಒಳಪಟ್ಟು ಕಾಯ್ದಿಟ್ಟು ಅನುದಾನ	200.00	0.00	100.00	100.00
	ಮೊತ್ತ	**1897.95**	**480.00**	**1007.95**	**410.00**
	ಒಟ್ಟಾರೆ ಮೊತ್ತ	**8015.37**	**2500.00**	**4267.63**	**1247.74**

3. ಸಂಖ್ಯೆ: ನಅಇ 375 ಎಂಎನ್‌ಎಂ 2018, ದಿನಾಂಕ 01-02-2019ರ ಆದೇಶದಂತೆ ರೂ. 8015.37 ಗಳ ಮುಖ್ಯಮಂತ್ರಿಗಳ ನವಬೆಂಗಳೂರು ಯೋಜನೆ ಯನ್ನು ಅನುಮೋದಿಸಿದ ನಂತರ ಈ ಕೆಳಗಿನ ಪೂರಕ ಆದೇಶಗಳನ್ನು ಸಹ ಹೊರಡಿಸಲಾಗಿದೆ.

(a) ಆದೇಶ ಸಂಖ್ಯೆ: ನಅಇ 648 ಎಂಎನ್‌ಎಂ 2018, ದಿನಾಂಕ: 31-05-2019
(b) ಆದೇಶ ಸಂಖ್ಯೆ: ನಅಇ 16 ಎಂಎನ್‌ಎಂ 2019, ದಿನಾಂಕ:04-06-2019
(c) ಆದೇಶ ಸಂಖ್ಯೆ: ನಅಇ 172 ಎಂಎನ್‌ಎಂ 2019, ದಿನಾಂಕ:04-05-2019
(d) ಆದೇಶ ಸಂಖ್ಯೆ: ನಅಇ 132 ಎಂಎನ್‌ಎಂ 2019, ದಿನಾಂಕ:31-05-2019
(e) ಆದೇಶ ಸಂಖ್ಯೆ: ನಅಇ 16 ಎಂಎನ್‌ಎಂ 2019, ದಿನಾಂಕ:04-06-2019
(f) ಆದೇಶ ಸಂಖ್ಯೆ: ನಅಇ 18 ಎಂಎನ್‌ಎಂ 2019, ದಿನಾಂಕ:04-06-2019
(g) ಆದೇಶ ಸಂಖ್ಯೆ: ನಅಇ 34 ಎಂಎನ್‌ಎಂ 2019, ದಿನಾಂಕ:15-07-2019
(h) ಆದೇಶ ಸಂಖ್ಯೆ: ನಅಇ 35 ಎಂಎನ್‌ಎಂ 2019, ದಿನಾಂಕ:18-07-2019
(i) ಆದೇಶ ಸಂಖ್ಯೆ: ನಅಇ 36 ಎಂಎನ್‌ಎಂ 2019, ದಿನಾಂಕ:16-07-2019
(j) ಆದೇಶ ಸಂಖ್ಯೆ: ನಅಇ 38 ಎಂಎನ್‌ಎಂ 2019, ದಿನಾಂಕ:12-07-2019
(k) ಆದೇಶ ಸಂಖ್ಯೆ: ನಅಇ 46 ಎಂಎನ್‌ಎಂ 2019, ದಿನಾಂಕ:18-07-2019
(l) ಆದೇಶ ಸಂಖ್ಯೆ: ನಅಇ 47 ಎಂಎನ್‌ಎಂ 2019, ದಿನಾಂಕ:15-07-2019
(m) ಆದೇಶ ಸಂಖ್ಯೆ: ನಅಇ 48 ಎಂಎನ್‌ಎಂ 2019, ದಿನಾಂಕ:15-07-2019
(n) ಆದೇಶ ಸಂಖ್ಯೆ: ನಅಇ 49 ಎಂಎನ್‌ಎಂ 2019, ದಿನಾಂಕ:15-07-2019
(o) ಆದೇಶ ಸಂಖ್ಯೆ: ನಅಇ 51 ಎಂಎನ್‌ಎಂ 2019, ದಿನಾಂಕ:15-07-2019

ಕೆ.ಎ. ದಯಾನಂದ
ಸರ್ಕಾರದ ಉಪ ಕಾರ್ಯದರ್ಶಿ-II
ನಗರಾಭಿವೃದ್ಧಿ ಇಲಾಖೆ

(p) ಆದೇಶ ಸಂಖ್ಯೆ: ನಅಇ 51 ಎಂಎನ್‌ಮೈ 2019, ದಿನಾಂಕ:20-06-2019
(q) ಆದೇಶ ಸಂಖ್ಯೆ: ನಅಇ 52 ಎಂಎನ್‌ಮೈ 2019, ದಿನಾಂಕ:18-07-2019
(r) ಆದೇಶ ಸಂಖ್ಯೆ: ನಅಇ 53 ಎಂಎನ್‌ಮೈ 2019, ದಿನಾಂಕ:18-07-2019
(s) ಆದೇಶ ಸಂಖ್ಯೆ: ನಅಇ 68 ಎಂಎನ್‌ಮೈ 2019, ದಿನಾಂಕ:15-07-2019
(t) ಆದೇಶ ಸಂಖ್ಯೆ: ನಅಇ 73 ಎಂಎನ್‌ಮೈ 2019, ದಿನಾಂಕ:08-07-2019
(u) ಆದೇಶ ಸಂಖ್ಯೆ: ನಅಇ 143 ಎಂಎನ್‌ಮೈ 2019, ದಿನಾಂಕ:11-06-2019
(v) ಆದೇಶ ಸಂಖ್ಯೆ: ನಅಇ 184 ಎಂಎನ್‌ಮೈ 2019, ದಿನಾಂಕ:12-07-2019
(w) ಆದೇಶ ಸಂಖ್ಯೆ: ನಅಇ 01 ಎಂಎನ್‌ಮೈ 2019, ದಿನಾಂಕ:22-05-2019
(x) ಆದೇಶ ಸಂಖ್ಯೆ: ನಅಇ 11 ಎಂಎನ್‌ಮೈ 2019, ದಿನಾಂಕ:11-06-2019
(y) ಆದೇಶ ಸಂಖ್ಯೆ: ನಅಇ 11ಎಂಎನ್‌ಮೈ 2019, ದಿನಾಂಕ:11-06-2019(2)
(z) ಆದೇಶ ಸಂಖ್ಯೆ: ನಅಇ 38 ಎಂಎನ್‌ಮೈ 2019, ದಿನಾಂಕ:12-07-2019
(aa) ಆದೇಶ ಸಂಖ್ಯೆ: ನಅಇ 19 ಎಂಎನ್‌ಮೈ 2019, ದಿನಾಂಕ:11-06-2019
(bb) ಆದೇಶ ಸಂಖ್ಯೆ: ನಅಇ 81 ಎಂಎನ್‌ಮೈ 2019, ದಿನಾಂಕ:08-03-2019
(cc) ಆದೇಶ ಸಂಖ್ಯೆ: ನಅಇ 82 ಎಂಎನ್‌ಮೈ 2019, ದಿನಾಂಕ:08-03-2019
(dd) ಆದೇಶ ಸಂಖ್ಯೆ: ನಅಇ 112 ಎಂಎನ್‌ಮೈ 2019, ದಿನಾಂಕ:08-03-2019
(ee) ಆದೇಶ ಸಂಖ್ಯೆ: ನಅಇ 113 ಎಂಎನ್‌ಮೈ 2019, ದಿನಾಂಕ:08-03-2019
(ff) ಆದೇಶ ಸಂಖ್ಯೆ: ನಅಇ 198 ಎಂಎನ್‌ಮೈ 2019, ದಿನಾಂಕ:23-05-2019
(gg) ಇತರ ಯಾವುದೇ ಪೂರಕ ಆದೇಶಗಳು

4. ಪ್ರಸ್ತುತ ಮಾನ್ಯ ಮುಖ್ಯಮಂತ್ರಿಗಳು ತಮ್ಮ ದಿನಾಂಕ 06-09-2019 ರ ಟಿಪ್ಪಣಿಯಲ್ಲಿ ನಗರದ ಸರ್ವಾಂಗೀಣ ಅಭಿವೃದ್ಧಿ ಮತ್ತು ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳನ್ನು ಬಿಬಿಎಂಪಿಯ ಕ್ರಿಯಾಯೋಜನೆಯಲ್ಲಿ ಸೇರಿಸುವ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ "ಮುಖ್ಯಮಂತ್ರಿಗಳ ನವನಗರೋತ್ಥಾನ" ಕ್ರಿಯಾಯೋಜನೆಯನ್ನು ಟಿಪ್ಪಣಿಯೊಂದಿಗೆ ಲಗತ್ತಿಸಿರುವಂತೆ ಅನುಮೋದಿಸಲು ಸಚಿವ ಸಂಪುಟದ ಅನುಮೋದನೆಯನ್ನು ಕೋರಲು ಸೂಚಿಸಿರುತ್ತಾರೆ.

5. ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿಯಲ್ಲಿ ಕರ್ನಾಟಕ ಸರ್ಕಾರವು 2018-19ನೇ ಸಾಲಿನ ಆಯವ್ಯಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಘೋಷಿಸಿ ಸರ್ಕಾರದ ಆದೇಶ ಸಂಖ್ಯೆ ನಅಇ 375 ಎಂಎನ್‌ಮೈ 2018, ಬೆಂಗಳೂರು ದಿನಾಂಕ 01-02-2019ರಂತೆ 2018-19, 2019-20 ಮತ್ತು 2020-21ರ ಆರ್ಥಿಕ ವರ್ಷಗಳಲ್ಲಿ ಅನುಷ್ಠಾನಗೊಳ್ಳುವ ಯೋಜನೆಯೊಂದಿಗೆ ರೂ. 8015.37 ಕೋಟಿಗಳ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗಳ ಷ್ಯೆಕಿ ನಿಯಮಾನುಸಾರ ಅನುವು ಮಾಡಬೇಕಿದ್ದ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಿಗೆ ಅನುದಾನವನ್ನು ನಿಗದಿಗೊಳಿಸಿರದ ಹಿನ್ನೆಲೆಯಲ್ಲಿ ಆನಂತರದಲ್ಲಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಿಗೆ 2018-19ಕ್ಕೆ ನಿಗದಿಯಾಗಿದ್ದ

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ರೂ.573.57 ಕೋಟಿಗಳ ಕ್ರಿಯಾಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ ನಅಇ 648 ಎಂಎನ್‌ಮೈ 2018, ಬೆಂಗಳೂರು ದಿನಾಂಕ 31-05-2019ರಂತೆ ಹೊರಡಿಸಲಾಗಿರುತ್ತದೆ. ಆದರೆ ಸದರಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳ ಬದಲಾಗಿ ಕಾಮಗಾರಿಗಳನ್ನು ಈವರೆಗೆ ಕೈಬಿಟ್ಟಿರುವುದಿಲ್ಲ. ಹೊರತಾಗಿ 2020-21ಕ್ಕೆ ಸಹ ಸುಮಾರು ರೂ.536 ಕೋಟಿಗಳನ್ನು ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಿಗಾಗಿ ಅನುವು ಮಾಡಿಕೊಳ್ಳಬೇಕಿರುತ್ತದೆ. ಎಂದು ತಿಳಿಸಲಾಗಿದೆ.

6. ವಿವಿಧ ಶಾಸಕರ ಕೋರಿಕೆಯ ಮೇರಗೆ ಮಾನ್ಯ ಮುಖ್ಯಮಂತ್ರಿಗಳು ಕ್ರಿಯಾಯೋಜನೆಯನ್ನು ಪರಿಷ್ಕರಿಸಿ ಅನುಮೋದಿಸಲು ಸಚಿವ ಸಂಪುಟದ ಮುಂದೆ ಮಂಡಿಸಲು ಸೂಚಿಸಿರುತ್ತಾರೆ. ಅನುದಾನ ಹಂಚಿಕೆ ಈಕೆಳಗಿನಂತಿದೆ.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಕೋಟಿ)
1	ಕೆರೆಗಳ ಅಭಿವೃದ್ಧಿ	317.25
2	ರಸ್ತೆಗಳ ಅಭಿವೃದ್ಧಿ	4107.34
3	ಬೃಹತ್ ನೀರುಗಾಲುವೆ ಅಭಿವೃದ್ಧಿ	1060.89
4	ಗ್ರೇಡ್ ಸೆಪರೇಟರ್ ನಿರ್ಮಾಣ	433.14
5	ಘನ ತ್ಯಾಜ್ಯ ನಿರ್ವಹಣೆ	584.35
6	ಕಟ್ಟಡಗಳು, ಆಟದ ಮೈದಾನಗಳು, ಉದ್ಯಾನಗಳು ಮತ್ತು ಆಸ್ಪತ್ರೆಗಳು	833.97
7	110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿ	364.09
8	ಐ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿ.	80.00
9	ಎನ್.ಎ.ಎಲ್-ವಿಂಡ್ ಟನಲ್ ರಸ್ತೆ ನಿರ್ಮಾಣ.	65.00
10	ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಿರುವ ಜಮೀನಿನಲ್ಲಿ ಅನುಷ್ಠಾನಗೊಳಿಸಬೇಕಿರುವ ಯೋಜನೆಗಳು	74.00
11	ಯೋಜನೆಗಳ ಭೂಸ್ವಾಧೀನ ವೆಚ್ಚ	50.00
12	ಬಿಡಿಎ ಯಿಂದ ಬಿಬಿಎಂಪಿಗೆ ವರ್ಗಾವಣೆಗೊಂಡಿರುವ ಯೋಜನೆಗಳು	45.34
	ಮೊತ್ತ	**8015.37**

7. ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿಯಲ್ಲಿ ಕ್ರಿಯಾಯೋಜನೆಯಲ್ಲಿನ ಕಾಮಗಾರಿಗಳನ್ನು 2019-20 ಮತ್ತು 2020-21ರಲ್ಲಿ ಅನುಷ್ಠಾನಗೊಳಿಸುವಂತೆ ಮತ್ತು ತುರ್ತು ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಅಧಿಸೂಚನ ಸಂಖ್ಯೆ: ಆಇ 344 ವೆಚ್ಚ-12/2018ರಂತೆ ಕ್ರಮ ಕೈಗೊಳ್ಳಲು ಸಹ ಸಚಿವ ಸಂಪುಟದ ಟಿಪ್ಪಣಿಯಲ್ಲಿ ಅಗತ್ಯ ಅನುಮೋದನೆಯನ್ನು ಪಡೆಯಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

8. ಅಲ್ಲದೇ 2018-19ರಲ್ಲಿ ಕೈಗೆತ್ತಿಕೊಳ್ಳಬೇಕಿದ್ದ ಸರ್ಕಾರದ ಆದೇಶ ಸಂಖ್ಯೆ ನಅಇ 648 ಎಂಎನ್‌ಮೈ 2018, ಬೆಂಗಳೂರು ದಿನಾಂಕ 31-05-2019ರಂತೆ ಅನುಮೋದಿಸಲಾಗಿರುವ ರೂ.573.57 ಕೋಟಿಗಳ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಕ್ರಿಯಾಯೋಜನೆಯಲ್ಲಿ

ಕೆ.ಎ. ಹಿದಾಯತುಲ್ಲ
ಸರ್ಕಾರದ ಜಂಟಿ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ಸೇರಿರುವ ಕಾಮಗಾರಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕಳುಹಿಸಿರುವ ಕ್ರಿಯಾಯೋಜನೆಯಲ್ಲಿ ಸೇರಿಸಲಾಗಿದೆ.

9. ರೂ.556.6 ಕೋಟಿಗಳ ಉಳಿಕೆ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಕಾಮಗಾರಿಗಳ ಕುರಿತು (ಅ) ಸದರಿ ನವನಗರೋತ್ಥಾನ ಕ್ರಿಯಾಯೋಜನೆಯಲ್ಲಿ ಸೇರಿರುವ ಸರ್ವಾಂಗೀಣ ಅಭಿವೃದ್ಧಿ ವಾರ್ಡ್ ಕಾಮಗಾರಿಗಳ 24.01% ನ್ನು ಮತ್ತು (ಆ) ಇತರ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಪೂರಕ ಯೋಜನೆಗಳನ್ನು 2019-20ಂ ಮತ್ತು 2020-21ರ ರೂ.536 ಕೋಟಿಗಳ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನಕ್ಕೆ ಪರಿಗಣಿಸಲು ಮತ್ತು ಯಾವುದೇ ಕೊರತೆಯನ್ನು ಡೀಮ್ಡ್ ವೆಚ್ಚವೆಂದು ಪರಿಗಣಿಸಲು ಸೂಚಿಸಲಾಗಿದೆ.

10. ದಿನಾಂಕ 16-09-2019 ರಂದು ಕೃಷ್ಣಾದಲ್ಲಿ ಮುಖ್ಯ ಕಾರ್ಯದರ್ಶಿಗಳು, ಅಮುಕಾ(ಆರ್ಥಿಕ ಇಲಾಖೆ), ಅಮುಕಾ(ನಗರಾಭಿವೃದ್ಧಿ ಇಲಾಖೆ) ಮತ್ತು ಬಿಬಿಎಂಪಿಯ ಆಯುಕ್ತರು ಭಾಗವಹಿಸಿದ್ದ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ 06-09-2019ರ ಟಿಪ್ಪಣಿಗೆ ಲಗತ್ತಿಸಿದ್ದ ಮುಖ್ಯಮಂತ್ರಿಗಳ ನವ ನಗರೋತ್ಥಾನ ಕ್ರಿಯಾಯೋಜನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಸೂಚಿಸಿ ಈಕೆಳಗಿನ ಯೋಜನೆಗಳನ್ನು ಸಹ ಕ್ರಿಯಾಯೋಜನೆಯಲ್ಲಿ ಹೆಚ್ಚುವರಿಯಾಗಿ ಕೈಗೆತ್ತಿಕೊಳ್ಳಲು ಸೂಚಿಸಿರುತ್ತಾರೆ.

(i) ಓ.ಆರ್.ಆರ್.ಸಿ.ಎ. ಸಂಸ್ಥೆ ಮಾನ್ಯಮುಖ್ಯಮಂತ್ರಿಗಳಿಗೆ ಅವರ ಇತ್ತೀಚಿನ ಭೇಟಿಯ ಸಂದರ್ಭದಲ್ಲಿ ಸಲ್ಲಿಸಿರುವ ರಸ್ತೆಗಳ ಅಭಿವೃದ್ಧಿಗಾಗಿ ರೂ.250 ಕೋಟಿಗಳು.

(ii) ಮೈಟ್ ಟಾಪಿಂಗ್ ಯೋಜನೆಯ ಅಂದಾಜುಪಟ್ಟಿಗಳನ್ನು ಪರಿಷ್ಕರಿಸಿ ಆಯ್ದ ಕೆಲ ರಸ್ತೆಗಳ ಮೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲು ರೂ.50 ಕೋಟಿಗಳು

(iii) ಮೆಕ್ಯಾನಿಕಲ್ ಸ್ವೀಪಿಂಗ್ ಮಷೀನುಗಳ ಖರೀದಿಗಾಗಿ ರೂ.25 ಕೋಟಿಗಳು ಮತ್ತು ಒಣ ಕಸ ಸಂಗ್ರಹಣಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ರೂ.3.5 ಕೋಟಿಗಳು

11. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಖ್ಯೆ ಹಾಗೂ ವಾಹನ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು, ಪರಿಹಾರೋಪಾಯದ ಭಾಗವಾಗಿ ಹೆಚ್ಚುವರಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕ್ಷಿಪ್ರವಾಗಿ ಕೈಗೆತ್ತಿಕೊಳ್ಳುವುದನ್ನು ಮುಂದುವರೆಸುವುದರಿಂದ ಸಾರ್ವಜನಿಕರಿಗೆ ಅನುಕೂಲತೆ ಹಾಗೂ ಸಂಚಾರ ದಟ್ಟಣೆಯ ನಿಯಂತ್ರಣ ಸಾಧ್ಯವಾಗುತ್ತದೆ.

12. ಆರ್ಥಿಕ ಇಲಾಖೆಯು ಕ್ರಿಯಾಯೋಜನೆಯನ್ನು ಒಟ್ಟು ರೂ.8015.37 ಕೋಟಿಗಳಿಗೆ ಮಿತಿಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳನ್ನು ಸಹ ಆದೇ ಮೊತ್ತದ ಮಿತಿಯಲ್ಲಿ 2018-19,2019-20 ಮತ್ತು 2020-21ರಲ್ಲಿ ಅನುಷ್ಠಾನಗೊಳಿಸಬೇಕಿರುತ್ತದೆ.

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

13. ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯ ರೂ. 8015.37 ಕೋಟಿಗಳನ್ನು ಈಗಾಗಲೇ ಸಚಿವಸಂಪುಟವು ಅನುಮೋದಿಸಲಾಗಿದ್ದು, ಅನುದಾನವನ್ನು ಒದಗಿಸಲಾಗಿರುತ್ತದೆ.

14. ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ನ್ಯಾಯಾಂಗದ ಸತತ ನಿರ್ದೇಶನಗಳ ಹಿನ್ನೆಲೆಯಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಪ್ರತಿದಿನ ಉತ್ಪಾದನೆ ಆಗುತ್ತಿರುವ ಘನತ್ಯಾಜ್ಯದ ಪರಿಮಾಣದಿಂದಾಗಿ ಬಿಬಿಎಂಪಿಯು ಮೈಜ್ಞಾನಿಕ ತ್ಯಾಜ್ಯ ವಿಲೇವಾರಿಯ ಸಮಸ್ಯೆ ಎದುರಿಸುತ್ತಿದ್ದು, ಸೂಕ್ತ ಅವಧಿಯಲ್ಲಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಸಹಾಯ ಅತ್ಯಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ಹೆಚ್ಚುವರಿ ಅನುದಾನ ನೀಡಬಹುದಾಗಿರುತ್ತದೆ.

15. ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಿರುವ ಜಮೀನುಗಳಲ್ಲಿ 3 ವರ್ಷಗಳ ಒಳಗಾಗಿ ಯೋಜನೆ ಅನುಷ್ಠಾನಗೊಳಿಸಬೇಕಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ಸಹಾಯ ಆದ್ಯತೆಯ ಮೇರೆಗೆ ಅಗತ್ಯವಿರುತ್ತದೆ.

16. ಮೈಟ್‌ಫೀಲ್ಡ್ ಪ್ರದೇಶದಲ್ಲಿ ಮೆಟ್ರೋ ಕಾಮಗಾರಿಯಿಂದ ಆಗುತ್ತಿರುವ ತೀವ್ರ ವಾಹನದಟ್ಟಣೆ ಸಮಸ್ಯೆಯನ್ನು ನಿವಾರಿಸಲು ನಗರದ ಐಟಿ ಬಿಟಿ ಹಬ್ ಆಗಿರುವ ಐ.ಟಿ.ಪಿ.ಎಲ್‌ಗೆ ಪರ್ಯಾಯ ಸಂಪರ್ಕ ಕಲ್ಪಿಸುವ 14 ರಸ್ತೆಗಳ ಅಭಿವೃದ್ಧಿಯನ್ನು ಈ ಪ್ರದೇಶದ ವಾಣಿಜ್ಯ ಮತ್ತು ಕೈಗಾರಿಕಾ ಬೆಳವಣಿಗೆಗಳ ದೃಷ್ಟಿಯಿಂದ ಮಾಡಬೇಕಿರುತ್ತದೆ.

17. ಸರ್ಕಾರವು ಮೇಲ್ಕಂಡ ಅಂಶಗಳನ್ನು ಕೂಲಂಕೂಷವಾಗಿ ಪರಿಶೀಲಿಸಿ, "ಮುಖ್ಯಮಂತ್ರಿಗಳ ನವ ನಗರೋತ್ಥಾನ ಕ್ರಿಯಾ ಯೋಜನೆ" ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂ ಎನ್ ಮೈ 2018,
ಬೆಂಗಳೂರು, ದಿನಾಂಕ: 20-09-2019

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್ ಮೈ 2018, ದಿನಾಂಕ: 01–02–2019 ರಂತೆ ಅನುಮೋದಿಸಿದ್ದ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆ ಅಡಿಯಲ್ಲಿ ಈ ಕೆಳಗಿನಂತೆ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ.

A. ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1 ರಿಂದ 12ರಲ್ಲಿ ವಿವರಿಸಿರುವ ವಿವಿಧ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ "ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ 4217-01-800-0-02" ರಲ್ಲಿ 2018-19ರ ರೂ2500 ಕೋಟಿಗಳ ಆಯವ್ಯಯ ಘೋಷಣೆಗೆ ರೂ.5515.37 ಕೋಟಿಗಳ ಹೆಚ್ಚುವರಿ ಅನುದಾನ ಕಲ್ಪಿಸಿ ರೂ.

ಕೆ.ಎ. ಹಿದಾಯತ್ತುಲ್ಲಾ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

8015.37 ಕೋಟಿಗಳ "ಮುಖ್ಯಮಂತ್ರಿಗಳ ನವನಗರೋತ್ಥಾನ ಕ್ರಿಯಾ ಯೋಜನೆಗೆ" ಅನುಮೋದನೆ ನೀಡುವ ಬಗ್ಗೆ ಮತ್ತು ಈ ಕಾಮಗಾರಿಗಳನ್ನು ಆಯವ್ಯಯದ ಘೋಷಣೆಯಂತೆ ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆದು, ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಆಇ 47 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ:14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಹಂತಹಂತವಾಗಿ 2019-20 ಮತ್ತು 2020-21ರ ಆರ್ಥಿಕ ವರ್ಷಗಳಲ್ಲಿ ಅನುಷ್ಠಾನ ಗೊಳಿಸಲು ಅನುಮೋದನೆ.

B. ಸದರಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯಲ್ಲಿ ಸೇರಿರುವ ಸರ್ವಾಂಗೀಣ ಅಭಿವೃದ್ಧಿ ವಾರ್ಡ್ ಕಾಮಗಾರಿಗಳ 24.01% ನ್ನು ಮತ್ತು ಇತರ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಕಾಮಗಾರಿಗಳನ್ನು 2019-20 ಮತ್ತು 2020-21ರ ರೂ.556.6 ಕೋಟಿಗಳ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನಕ್ಕೆ ಪರಿಗಣಿಸಲು ಅನುಮೋದನೆ ಮತ್ತು ಯಾವುದೇ ಕೊರತೆಯನ್ನು ಡೀಮ್ಡ್ ವೆಚ್ಚವೆಂದು ಪರಿಗಣಿಸಲು ಅನುಮೋದನೆ.

C. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಆಯುಕ್ತರ ಜವಾಬ್ದಾರಿಯಾಗಿರುತ್ತದೆ.

D. ಕ್ರಿಯಾ ಯೋಜನೆಯ ಅನುಬಂಧ 6 ರಲ್ಲಿ ಕೆಂಪೇಗೌಡ ಪ್ರತಿಷ್ಠಾನಕ್ಕೆ ಕಾಯ್ದಿಟ್ಟ ರೂ.100 ಕೋಟಿಗಳ ಅನುದಾನಕ್ಕೆ ಸೂಕ್ತ ಯೋಜನೆಗಳನ್ನು ಗುರುತಿಸಿ ಅನುಮೋದಿಸುವ ಮತ್ತು ಅನುದಾನ ಲಭ್ಯಗೊಳಿಸುವ ಸಚಿವಸಂಪುಟದ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರತ್ಯಾಯೋಜಿಸಲು ಅನುಮೋದನೆ.

E. ತುರ್ತು ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 344 ವೆಚ್ಚ-12/2018ರಂತೆ ಪರಿಹಸಲು ಅನುಮೋದನೆ.

F. ಮೇಲಿನಂತೆ ರೂ.8015.37 ಕೋಟಿಗಳ ಮುಖ್ಯಮಂತ್ರಿಗಳ ನವ ನಗರೋತ್ಥಾನ ಕ್ರಿಯಾಯೋಜನೆಗೆ ಹೆಚ್ಚುವರಿಯಾಗಿ ಈ ಕೆಳಗಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮತ್ತು ಸಂಬಂಧಪಟ್ಟ ಮೊತ್ತವನ್ನು ವೆಚ್ಚಮಾಡಲು ಅನುಮೋದನೆ.

1) ರೂ.250 ಕೋಟಿಗಳ ವೆಚ್ಚದಲ್ಲಿ ಓ.ಆರ್.ಆರ್.ಸಿ.ಎ. ಸಂಸ್ಥೆ ಮಾನ್ಯಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿರುವ ರಸ್ತೆಗಳ ಅಭಿವೃದ್ಧಿ.

2) ರೂ.50 ಕೋಟಿಗಳ ವೆಚ್ಚದಲ್ಲಿ, ಪೈಟ್ ಟಾಪಿಂಗ್ ಯೋಜನೆಯ ಅಂದಾಜುಪಟ್ಟಿಗಳನ್ನು ಪರಿಷ್ಕರಿಸಿ ಆಯ್ದ ಕೆಲ ರಸ್ತೆಗಳ ಪೈಟ್ ಟಾಪಿಂಗ್ ಕಾಮಗಾರಿ.

ಕೆ.ಎ. ದಯಾನಂದ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

3) ಮೆಕ್ಯಾನಿಕಲ್ ಸ್ವೀಪಿಂಗ್ ಮಷೀನುಗಳ ಖರೀದಿಗಾಗಿ ರೂ.25 ಕೋಟಿಗಳು ಮತ್ತು ರೂ.3.5 ಕೋಟಿಗಳ ವಚ್ಚದಲ್ಲಿ ಒಣ ಕಸ ಸಂಗ್ರಹಣಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು.

G. ಕ್ರಿಯಾಯೋಜನೆಯಲ್ಲಿ ಅನುಷ್ಠಾನಗೊಳಿಸಬೇಕಿರುವ ಕಾಮಗಾರಿಗಳಿಗೆ ಅನಿವಾರ್ಯ ಕಾರಣಗಳಿಗಾಗಿ ಬದಲಿ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಬೇಕಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅನುಮೋದನ ಪಡೆದುಕೊಂಡು ಅನುಷ್ಠಾನಗೊಳಿಸಲು ಅನುಮೋದನೆ.

<u>ಪರತ್ತುಗಳು:</u>

1. ಸದರಿ ಕಾಮಗಾರಿಗಳಿಗೆ ಅವಶ್ಯಕವಿರುವ ಅನುದಾನವನ್ನು "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಗಳ ಲೆಕ್ಕ ಶೀರ್ಷಿಕೆ "ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ 4217-01-800-0-02"ರ ಅಡಿಯಲ್ಲಿ ಅವಕಾಶ ಕಲ್ಪಿಸಿದ.

2. "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಿರುವ ಈ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಕಡ್ಡಾಯವಾಗಿ ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000ರಂತೆ ಹಾಗೂ e-procurement portal ಮುಖಾಂತರ ಪ್ಯಾಕೇಜ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು 2 ಹಂತದಲ್ಲಿ ಟೆಂಡರ್ ಕರೆದು ಕೈಗೊಂಡು, ಆಡಳಿತಾತ್ಮಕ ಅನುಮೋದನೆಯನ್ನು ಮತ್ತು ಟೆಂಡರ್‌ಗಳಿಗೆ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅನುಷ್ಠಾನಗೊಳಿಸುವುದು.

3. ಕ್ರಿಯಾಯೋಜನೆಯ ಅನುಬಂಧ 6 ರಲ್ಲಿ ಕೆಂಪೇಗೌಡ ಪ್ರತಿಷ್ಠಾನಕ್ಕೆ ಕಾಯ್ದಿಟ್ಟ ರೂ.100 ಕೋಟಿಗಳ ಅನುದಾನಕ್ಕೆ ಸೂಕ್ತ ಯೋಜನೆಗಳನ್ನು ಗುರುತಿಸಿ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದುಕೊಳ್ಳಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ತುರ್ತು ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 344 ವೆಚ್ಚ-12/2018ರಂತೆ ವಹಿಸಲು ಅನುಮೋದನೆ ನೀಡಲಾಗಿದೆ.

5. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ದಿನಾಂಕ: 14-06-2016 ಮತ್ತು 03-11-2016ರಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯಿಂದ ಹಾಗೂ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನ ಗೊಳಿಸತಕ್ಕದ್ದು.

6. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರ ಯಾವುದೇ ಯೋಜನೆ/ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಆಯುಕ್ತರು, ಬಿ.ಬಿ.ಎಂ.ಪಿ. ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಂಡು ಟೆಂಡರ್ ಕರೆಯತಕ್ಕದ್ದು.

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

7. ಸದರಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾಯೋಜನೆಯಲ್ಲಿ ಸೇರಿರುವ ಸರ್ವಾಂಗೀಣ ಅಭಿವೃದ್ಧಿ ವಾರ್ಡ್ ಕಾಮಗಾರಿಗಳ 24.01% ನ್ನು ಮತ್ತು ಇತರ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಕಾಮಗಾರಿಗಳನ್ನು 2019-20 ಮತ್ತು 2020-21ರ ರೂ.556.6 ಕೋಟಿಗಳ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನಕ್ಕೆ ಪರಿಗಣಿಸುವುದು ಮತ್ತು ಯಾವುದೇ ಕೊರತೆಯನ್ನು ಡೀಮ್ಡ್ ವಚ್ಚವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ವಿವರವಾದ ಕಾಮಗಾರಿಗಳ ಪಟ್ಟಿಯನ್ನು ಆಯುಕ್ತರು 30 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವುದು. ಅಲ್ಲದೇ ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಅನುಷ್ಠಾನ ಗೊಳಿಸುವುದು ಬಿಬಿಎಂಪಿಯ ಆಯುಕ್ತರ ಜವಾಬ್ದಾರಿಯಾಗಿರುತ್ತದೆ.

8. ಕ್ರಿಯಾಯೋಜನೆಯಲ್ಲಿ ಅನುಷ್ಠಾನಗೊಳಿಸಬೇಕಿರುವ ಕಾಮಗಾರಿಗಳನ್ನು ಬದಲಾಯಿಸುವುದನ್ನು ಪ್ರತಿಬಂಧಿಸಿದೆ. ಪರ್ಯಾಯ ಕಾಮಗಾರಿಗಳನ್ನು ಅನಿವಾರ್ಯ ಕಾರಣಗಳಿಗಾಗಿ ಅನುಷ್ಠಾನಗೊಳಿಸಲೇಬೇಕಿದ್ದಲ್ಲಿ ಆಯುಕ್ತರ ಸ್ಪಷ್ಟ ಶಿಫಾರಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಾನ್ಯ ಮುಖ್ಯ ಮಂತ್ರಿಗಳ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸುವ ವಿಕಲ್ಪ ಕಲ್ಪಿಸಿದೆ.

9. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ತೀರ್ಪು ಮತ್ತು ಆದೇಶಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಬಿ.ಬಿ.ಎಂ.ಪಿ.ಯ ಆಯುಕ್ತರ ಜವಾಬ್ದಾರಿಯಾಗಿರುತ್ತದೆ.

10. ಪ್ರಸ್ತುತ ಅನುಷ್ಠಾನಗೊಳ್ಳುತ್ತಿದ್ದು ಈ ಕ್ರಿಯಾಯೋಜನೆಯಲ್ಲಿ ಹೆಚ್ಚುವರಿ ಅನುದಾನ ಒದಗಿಸಲಾಗಿರುವ ಯೋಜನೆಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಿ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರವಷ್ಟೆ ಅನುಷ್ಠಾನಗೊಳಿಸತಕ್ಕದ್ದು.

11. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿ.ಬಿ.ಎಂ.ಪಿ.ಯ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮವಹಿಸತಕ್ಕದ್ದು.

12. ಆಯುಕ್ತರು, ಬಿ.ಬಿ.ಎಂ.ಪಿ. ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕ್ರೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

13. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಆಯುಕ್ತರು, ಬಿ.ಬಿ.ಎಂ.ಪಿ. ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ತಪ್ಪದೆ ಸಲ್ಲಿಸತಕ್ಕದ್ದು.

ಕೆ.ಎ. ದಯಾನಂದ
ಕೆ.ಎ. ದಯಾನಂದ
ಸರ್ಕಾರದ ಅಪರ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ಈ ಆದೇಶವನ್ನು ದಿನಾಂಕ: 18-09-2019 ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ: 533/2019 ರಲ್ಲಿ ಕೈಗೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎ.ಹಿದಾಯತ್ತುಲ್ಲ)ಐಎಎಸ್/19
ಸರ್ಕಾರದ ಉಪ ಕಾರ್ಯದರ್ಶಿ-3,
ನಗರಾಭಿವೃದ್ಧಿ ಇಲಾಖೆ

ಕೆ.ಎ. ಹಿದಾಯತ್ತುಲ್ಲ
ಸರ್ಕಾರದ ಉಪ ಕಾರ್ಯದರ್ಶಿ-3
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಲೆಕ್ಕ ಪರಿಶೋಧನೆ/ಲೆಕ್ಕಪತ್ರ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ: 533/2019, ದಿನಾಂಕ: 18-09-2019).
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
8. ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಶಾಖಾ ರಕ್ಷಾ, ಕಡತ/ಹೆಚ್ಚುವರಿ ಪ್ರತಿಗಳು/ಕಂಪೆಂಡಿಯಂ/ಇಲಾಖಾ ವೆಬ್‌ಸೈಟ್.

1482

Sl No	Type	Ward No	Name of the work	Amount (Rs in Lakhs)
66	SCSP	7	Improvements to roads and drains of Amruthahalli colony of Lakshminaraya temple road from Lakshminarayana temple (left side) and in Amruthahalli surrounding areas in Ward No.7 Byatarayanapura	75.00
67	SCSP	8	Improvements to Roads and drains of Kodigehalli A.K.Colony in Ward No.8 Kodigehalli	75.00
68	SCSP	8	Improvements to Roads and drains of B.B.Nagara in Ward No.8 Kodigehalli	75.00
69	SCSP	8	Improvements to Roads and drains of Maruthinagara in Ward No.8 Kodigehalli	50.00
70	SCSP	9	Improvements to roads and drains at Thindlu colony, Katteramma temple, Bhovi colony and Kempegowdanagara in Ward No.09, Vidyaranyapura	99.00
71	SCSP	10	Construction of RCC drain, cement concrete road and missing covering slabs at Elumandamma Layout and surrounding ara in Ward No.10	99.00
72	SCSP	10	Providing cement concrete road, construction of culverts and RCC drains and providing missing covering slabs in Kateramma layout and surrounding areas in Ward No.10	99.00
73	SCSP	11	Improvements to Roads and Drains at Kuvempunagara 1st Stage and surroumding area in Ward No.11 Kuvempunagara	99.00
74	SCSP	11	Improvements to Roads and Drains at Kuvempunagara 2nd Stage and surrounding area in Ward No.11 Kuvempunagara	99.00
75	SCSP	11	Improvements to Roads and Drains at Singapura and surrounding area in Ward No.11 Kuvempunagara	99.00
76	SCSP	11	Improvements to Roads and Drains at Ramachandrapura and surrounding area in Ward No.11 Kuvempunagara	99.00
77	SCSP	11	Improvements to Roads and Drains at Mariyamma Block and surrounding area in Ward No.11 Kuvempunagara	99.00
78	SCSP	11	Improvements to Roads and Drains at Devappa Layout and surrounding area in Ward No.11 Kuvempunagara	99.00
79	SCSP	11	Improvements to Roads and Drains at Raghavendra colony and surrounding area in Ward No.11 Kuvempunagara	99.00

ಕೆ.ಎ. ಹುದಾಯತುಲ್ಲಾ
ಸರ್ಕಾರದ ಉಪ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ